ಕರ್ನಾಟಕ ಸರ್ಕಾರ

ಸಂ: ಎಫ್ ಡಿ 02 ಟಿಟಿಸಿ 2020

ಕರ್ನಾಟಕ ಸರ್ಕಾರದ ಸಚಿವಾಲಯ

ವಿಧಾನ ಸೌಧ

ಬೆಂಗಳೂರು, ದಿನಾಂಕ:30.3.2020

**ಸುತ್ತೋಲೆ**

ವಿಷಯ: ವಿವಿಧ ಮಾಸಾಶನಗಳನ್ನು ಸಂಬಂದಿಸಿದ ಇಲಾಖೆಗಳು ಖಜಾನೆ-2ರ ಬಿಎಂಎಸ್ ಮಾಡ್ಯೂಲ್ ಮೂಲಕ ಪಾವತಿಸುವ ಕುರಿತು.

ಉಲ್ಲೇಖ: 1.ಸರ್ಕಾರದ ಆದೇಶ ಸಂಖ್ಯೆಆಇ: 02.ಟಿಟಿಸಿ 2019 ದಿ13.02.2020

2.ಖಜಾನೆ ಆಯುಕ್ತರ ಕೆ2/ಪಿ.ಎಮ್.ಯು/29/2019-20

ದಿನಾಂಕ: 27.03.2020

--------

1. ಉಲ್ಲೇಖ (1)ರ ಸರ್ಕಾರದ ಆದೇಶದಲ್ಲಿ ದಿನಾಂಕ 01.03.2020 ರಿಂದ ಜಾರಿಗೆ ಬರುವಂತೆ, ವಿವಿಧ ಇಲಾಖೆಗೆ ಸಂಬಂದಿಸಿದ ವಿವಿಧ ವರ್ಗಗಳ ಮಾಸಾಶನ/ ಗೌರವಧನಗಳನ್ನು ಪ್ರಸ್ತುತ ಪಿಪಿಓ ಗಳ ಮೇಲೆ ಖಜಾನಾಧಿಕಾರಿಗಳು ಪಾವತಿಸುತ್ತಿರುವ ವ್ಯವಸ್ದೆಯನ್ನು ರದ್ದುಪಡಿಸಿ ಸದರಿ ಪಾವತಿಗಳನ್ನು ಸಂಬಂದಪಟ್ಟ ಇಲಾಖೆಗಳ ಡಿಡಿಓಗಳು ಖಜಾನೆ-2ರ ಬಿಎಂಎಸ್ ಮಾಡ್ಯೂಲ್ ನಲ್ಲಿ ಸಾದಿಲ್ವಾರು ಬಿಲ್ಲಿನಲ್ಲಿ ತಯಾರಿಸಿ ಸಂಬಂಧಪಟ್ಟ ಖಜಾನೆಗಳಿಗೆ ಸಲ್ಲಿಸುವ ಮೂಲಕ ನೇರವಾಗಿ ಫಲಾನುಭವಿಗಳ ಬ್ಯಾಂಕ್ ಖಾತೆಗೆ ವರ್ಗಾಯಿಸಲು ಆದೇಶಿಸಲಾಗಿದೆ.

2. ಈ ಕುರಿತು ಖಜಾನೆಗಳಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಉಲ್ಲೇಖಿತ (2) ರ ಸುತ್ತೋಲೆಗಳಲ್ಲಿ ವಿವರವಾದ ಸೂಚನೆಗಳನ್ನು ನೀಡಲಾಗಿದೆ. ಅದರನ್ವಯ ಫೆಬ್ರವರಿ 2020 ಮಾಹೆಯ ಪಾವತಿಯ ನಂತರ ಬ್ಯಾಂಕುಗಳಿಂದ ಮತ್ತು ಉಪ ಖಜಾನೆಗಳಿಂದ ಪಡೆದಿರುವ ಎಲ್ಲಾ ಪಿ.ಪಿ.ಓ ಗಳನ್ನು ವರ್ಗವಾರು ವಿಂಗಡಿಸಿ ಸಂಬಂಧಿಸಿದ ಮಂಜೂರಾತಿ ಪ್ರಾಧಿಕಾರಗಳಿಗೆ ದಿನಾಂಕ:20.03.2020 ರೊಳಗಾಗಿ ಸ್ವೀಕೃತಿ ಪಡೆದು ವರ್ಗಾಯಿಸಲು ತಿಳಿಸಲಾಗಿರುತ್ತದೆ.

3. **ಪ್ರಸ್ತುತ ರಾಜ್ಯವ್ಯಾಪಿ ಕೋವಿಡ್–19 ಸಂಕ್ರಾಮಿಕವಾಗಿ ಹರಡುತ್ತಿರುವ ಹಿನ್ನೆಲೆಯಲ್ಲಿ ಲಾಕ್ ಡೌನ್ ಇರುವುದರಿಂದ ಈವರೆವಿಗೂ ಸದರಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗಿರುವುದಿಲ್ಲ. ಆದ್ದರಿಂದ ಖಜಾನೆ ಆಯುಕ್ತರು ಈ ಪ್ರಕ್ರಿಯೆಗೆ ಕಾಲಾವಕಾಶ ನೀಡಬೇಕೆಂದು ಕೋರಿರುತ್ತಾರೆ.**

4. **ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಉಲ್ಲೇಖಿತ ಆದೇಶ ಸಂಖ್ಯೆ: ಆಇ 1 ಟಿಟಿಸಿ 2020 ದಿ:13.2.2020ರ ಆದೇಶದಲ್ಲಿ ನಮೂದಿಸಲಾದ ವರ್ಗಗಳ ಪಿಂಚಣಿಗಳ ಪಾವತಿಯನ್ನು ಏಪ್ರಿಲ್ 2020 ರಲ್ಲಿ ಯಥಾ ಸ್ಥಿತಿಯಲ್ಲಿ ಮುಂದುವರೆಸಲು ಹಾಗೂ ಮೇ 2020 ರಿಂದ ಸಂಬಂಧಪಟ್ಟ ಇಲಾಖಾಧಿಕಾರಿಗಳು ಖಜಾನೆ–2 ರ ಬಿ.ಎಂ.ಎಸ್ ಮಾಡ್ಯೂಲ್ನಲ್ಲಿ ಸಾದಿಲ್ವಾರು ಬಿಲ್ಲಿನಲ್ಲಿ ಸಂಬಂಧಪಟ್ಟ ಖಜಾನೆಗಳಿಗೆ ಸಲ್ಲಿಸಿ ನೇರವಾಗಿ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಮಾಸಾಶನ/ ಗೌರವಧನಗಳನ್ನು ಪಾವತಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ.**

30/3/2020
(ಹೆಚ್.ಎ.ಶೋಭ)
ಸರ್ಕಾರದ ಉಪ ಕಾರ್ಯದರ್ಶಿ
(ಆನಿ ಮತ್ತು ಬಿ.ಸಿ.ಸಿ),
ಆರ್ಥಿಕ ಇಲಾಖೆ.

ಪ್ರತಿಗಳು:–

1. ಪ್ರಧಾನ ಮಹಾಲೇಖಪಾಲರು, ಲೆಕ್ಕಪತ್ರಗಳು ಮತ್ತು ಹಕ್ಕುಗಳು, ಕರ್ನಾಟಕ, ರೆಸಿಡೆನ್ಸಿ ಪಾರ್ಕ್ ರಸ್ತೆ, ಅಂಚೆ ಚೀಲ ಸಂಖ್ಯೆ : 5329/5369, ಬೆಂಗಳೂರು–560 001.
2. ಪ್ರಧಾನ ಮಹಾಲೇಖಪಾಲರು, ಲೆಕ್ಕ ತನಿಖೆ–1, ಕರ್ನಾಟಕ, ರೆಸಿಡೆನ್ಸಿ ಪಾರ್ಕ್‌ರಸ್ತೆ, ಅಂಚೆ ಚೀಲ ಸಂಖ್ಯೆ :5329/5369, ಬೆಂಗಳೂರು–560001.
3. ಪ್ರಧಾನ ಮಹಾಲೇಖಪಾಲರು, ಲೆಕ್ಕ ತನಿಖೆ–2, ಕರ್ನಾಟಕ, ರೆಸಿಡೆನ್ಸಿ ಪಾರ್ಕ್ ರಸ್ತೆ, ಅಂಚೆ ಚೀಲ ಸಂಖ್ಯೆ: 329/5369, ಬೆಂಗಳೂರು–560001.
4. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಆರ್ಥಿಕ ಇಲಾಖೆ(ಖಜಾನೆ–2) 7ನೇ ಮಹಡಿ, ವಾಣಿಜ್ಯ ತೆರಿಗೆ ಇಲಾಖೆ, ಗಾಂಧಿನಗರ, ಬೆಂಗಳೂರು–09.
6. ಆಯುಕ್ತರು, ಖಜಾನೆ ಇಲಾಖೆ ಪೋಡಿಯಂ ಬ್ಲಾಕ್, ಬೆಂಗಳೂರು.
7. ಎಲ್ಲಾ ಜಿಲ್ಲಾ ಖಜಾನಾಧಿಕಾರಿಗಳು.
8. ಎಲ್ಲಾ ಪಿಂಚಣಿ ಪಾವತಿ ಬ್ಯಾಂಕ್‌ಗಳು–ಖಜಾನೆ ಆಯುಕ್ತರ ಮುಖಾಂತರ.
9. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.